# ಗಾಂಧಿನಗರ ಪೋಸ್ಟ್

# ಲೂಸ್‌ಗಳ ಲೋಕದಲ್ಲಿ...

ನಾವು ನೀವು ಲೂಸ್‌ಗಳು! ಹೀಗೆ, ಕೊಂಚ 'ಭಂಡ ಧೈರ್ಯ'ದಿಂದ ಹೇಳುತ್ತಿದ್ದಾರೆ ಅರುಣ್. ಕಳೆದ ಒಂಬತ್ತು ವರ್ಷಗಳಿಂದ ಚಿತ್ರರಂಗದಲ್ಲಿ ಸಹಾಯಕರಾಗಿ ಏಗಿರುವ ಅರುಣ್, ಗಾಂಧಿನಗರದಲ್ಲಿ ಅದೆಷ್ಟು ಲೂಸ್‌ಗಳನ್ನು ಕಂಡಿದ್ದಾರೋ ಏನೋ... ತಮ್ಮ ಅನುಭವವನ್ನೆಲ್ಲ ಈಗ ಸಿನಿಮಾ ಮಾಡುತ್ತಿದ್ದಾರೆ, ನಿರ್ದೇಶಕನ ಕ್ಯಾಪ್ ತಲೆಗೆ ಏರಿಸಿಕೊಂಡಿದ್ದಾರೆ.

ಅರುಣ್ ಕಲೆ ಹಾಕಿರುವ ಲೂಸ್‌ಗಳ ಪಟ್ಟಿ ಮಜವಾಗಿದೆ. ಮೊದಲನೆಯ ಲೂಸ್ ಶ್ರೀಮುರಳಿ. ಕೂದಲು ಉದ್ದ ಮಾಡಿಕೊಂಡಿರುವ ಅವರು ಲೂಸ್ ವಿಶೇಷಣವನ್ನು ಎಂಜಾಯ್ ಮಾಡುತ್ತಿದ್ದರು. ಮಧ್ಯಮ ಲೂಸ್, ಒಲವೇ ಮಂದಾರದ ಶ್ರೀಕಾಂತ್. ಚಿತ್ರದಲ್ಲಿ ಅವರದು ಮುಸ್ಲಿಂ ತರುಣನ ಪಾತ್ರವಂತೆ. ಮೂರನೇ ಲೂಸ್ ಅಕುಲ್ ಬಾಲಾಜಿ. ಈ ಮೂವರಿಗೆ ಜೋಡಿಯಾಗಿ ರೇಖಾ, ಶ್ರವ್ಯ ಮತ್ತು ಐಶ್ವರ್ಯಾ ನಾಗ್ ನಟಿಸುತ್ತಿದ್ದಾರೆ.

ರೇಖಾ ಹಳೆಯ ಜಿಂಕೆ ಮರಿ. ಐಶ್ವರ್ಯಾ ನಾಗ್ ಕೂಡ ಬಣ್ಣ ಹಚ್ಚಿಕೊಂಡವರೇ. ಹೊಸ ಹುಡುಗಿ ಶ್ರವ್ಯಳಿಗೆ ಅಭಿನಯ ಹೊಸತಾದರೂ ಚಿತ್ರರಂಗ ಹೊಸತಲ್ಲ. ಕನಸುಕಂಗಳ ಈ ಯುವನಟಿ ರೇಖಾದಾಸ್ ಮತ್ತು ನಿರ್ದೇಶಕ ಓಂಪ್ರಕಾಶ್ ರಾವ್ ಅವರ ಮಗಳು. 'ನನ್ನ ಮೇಲೀಗ ದೊಡ್ಡ ಜವಾಬ್ದಾರಿ ಇದೆ' ಎಂದು ಥೇಟ್ ಲೂಸ್‌ನಂತೆಯೇ ಕಣ್ಣರಳಿಸಿದರು ಶ್ರವ್ಯ.

'ಲೂಸ್‌ಗಳು' ಚಿತ್ರದ ಮತ್ತೊಂದು ವಿಶೇಷ ಚಿತ್ರದ ಸಂಗೀತ ನಿರ್ದೇಶಕಿ ವಾಣಿ ಹರಿಕೃಷ್ಣ. ಕನ್ನಡ ಚಿತ್ರರಂಗದಲ್ಲಿ ಸದ್ಯಕ್ಕೆ ಗೆಲ್ಲುವ ಕುದುರೆ ಎಂದೇ ಬಿಂಬಿಸಲಾಗಿರುವ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಅವರ ಪತ್ನಿ ಈ ವಾಣಿ. ಆಗಾಗ ಕೆಲವು ಸಿನಿಮಾ ಗೀತೆಗಳನ್ನು ಹಾಡಿದ್ದು ಬಿಟ್ಟರೆ ವಾಣಿ ಗಾಂಧಿನಗರದಲ್ಲಿ ಸುಳಿದಾಡಿರುವುದು ಕಡಿಮೆ. ಇದೀಗ ಸ್ವತಂತ್ರ ಸಂಗೀತ ನಿರ್ದೇಶನದ ಮೂಲಕ ಅವರು ಹೊಸ ಸಾಧ್ಯತೆಯೊಂದಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಿದ್ದಾರೆ. ಸ್ವಭಾವತಃ ಮಾಧುರ್ಯದ ಗೀತೆಗಳೆಂದರೆ ಅವರಿಗಿಷ್ಟ. ಆದರೆ, ಲೂಸ್‌ಗಳ ಚಿತ್ರದಲ್ಲಿ ಮೆಲೋಡಿಗೆಲ್ಲಿ ಜಾಗ?

ಅನೇಕ ಹೊಸ ಪ್ರತಿಭೆಗಳು 'ಲೂಸ್‌ಗಳು' ಮೂಲಕ ಗಾಂಧಿನಗರ ಪ್ರವೇಶ ಮಾಡುತ್ತಿದ್ದಾರೆ. ಆ ಪಟ್ಟಿಯಲ್ಲಿ ತಲಾ ಒಂದು ಗೀತೆ ರಚಿಸಿರುವ ಆಟೊ ಚಾಲಕ ಮಂಜುನಾಥ್ ಹಾಗೂ ಹೋಟೆಲ್ ಕಾರ್ಮಿಕ ರಾಘವೇಂದ್ರ ಕೂಡ ಸೇರಿದ್ದಾರೆ.






## ಆಟೋದಲ್ಲಿ ಗಣೇಶ!

ರೋಮಿಯೋ ಹ್ಯಾಂಗೋವರ್‌ನಿಂದ ಹೊರ ಬಂದಂತಿರುವ ಗಣೇಶ್ ಆಟೊ ಡ್ರೈವರ್ ಪೋಷಾಕಿನಲ್ಲಿದ್ದರು. ಅವರ ಪಕ್ಕದಲ್ಲಿ ಲಂಗ ದಾವಣಿ ತೊಟ್ಟ ಮುದ್ದು ನಟಿ ಭಾಮಾ. ಏನಿದು ಹೊಸ ಪ್ರೇಮ ಪುರಾಣ ಎನ್ನುವ ಪ್ರಶ್ನೆಗೆ ನಿರ್ದೇಶಕ ಉದಯ ಪ್ರಕಾಶ್ ಬೆಟ್ಟು ಮಾಡಿದ್ದು 'ಆಟೋ ರಾಜ' ಪೋಸ್ಟರ್‌ನತ್ತ.

'ಆಟೋ ರಾಜ' ಶಂಕರ್‌ನಾಗ್ ಅಭಿನಯದ ಚಿತ್ರ. ಆ ಚಿತ್ರದ ಮೂಲಕವೇ ಆಟೋ ಚಾಲಕರ ಕಣ್ಮಣಿಯಾಗಿ ಶಂಕರ್ ರೂಪುಗೊಂಡಿದ್ದರು. ಇದೀಗ, ಶಂಕರ್‌ಗೆ ಶ್ರದ್ಧಾಂಜಲಿ ರೂಪದಲ್ಲಿ 'ಆಟೋ ರಾಜ' ಹೆಸರಿನ ಚಿತ್ರ ಮತ್ತೆ ರೂಪುಗೊಳ್ಳುತ್ತಿದೆ. ಹೆಸರು ಹಳತಾದರೂ ಕಥೆ ನವನವೀನವಂತೆ. ನೂರಾರು ಆಟೋ ಚಾಲಕರ ಬದುಕಿನ ಕಥೆಯನ್ನು ಆಲಿಸಿದ ನಂತರ ನಿರ್ದೇಶಕರು ಈ ಕಥೆ ಕಟ್ಟಿದ್ದಾರಂತೆ.

ತಮ್ಮ ನೆಚ್ಚಿನ ನಟ ಶಂಕರ್‌ನಾಗ್ ಅವರನ್ನು ನೆನಪಿಸುವ ಪಾತ್ರದಲ್ಲಿ ನಟಿಸುತ್ತಿರುವುದು ಗಣೇಶ್‌ಗೆ ರೋಮಾಂಚನ ತಂದಿದೆ. ಈಚೆಗೆ ಸವಾಲಿನ ಪಾತ್ರಗಳು ತಮ್ಮನ್ನು ಹುಡುಕಿಕೊಂಡು ಬರುತ್ತಿರುವುದು ನಟನಾಗಿ ಅವರಿಗೆ ಖುಷಿ ಕೊಟ್ಟಿದೆ. ಆಟೋ ರಾಣಿಯಾಗಿ ಭಾಮಾ ನಟಿಸುತ್ತಿದ್ದಾರೆ. ಚಿತ್ರದಲ್ಲಿ ಅವರದು ಹಳ್ಳಿಯಿಂದ ನಗರಕ್ಕೆ ಬರುವ ಹುಡುಗಿಯ ಪಾತ್ರ. ಮನಸ್ಸಿನ ತುಂಬ ಕನಸುಗಳನ್ನು ತುಂಬಿಕೊಂಡ ಸಾಂಪ್ರದಾಯಿಕ ಹುಡುಗಿಯ ಪಾತ್ರದ ಪರಿಕಲ್ಪನೆ ಅವರಿಗೆ ಖುಷಿಕೊಟ್ಟಿದೆ.

■ ರಘು